16.	ಉತ್ತರ ಕನ್ನಡ ಜಿಲ್ಲೆ	3206
17.	ಗುಲ್ಬರ್ಗಾ	6603
18.	ಬೀದರ್	7293
19.	ಬಳ್ಳಾರಿ	13013
20.	ರಾಯಚೂರು	4853

ಹುಕ್ಕೇರಿ ಹಾಗೂ ಸಂಕೇಶ್ವರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ

94 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಕ್ಕೇರಿ ಹಾಗೂ ಸಂಕೇಶ್ವರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿವೆಯೇ?*

ಆ) *ಹಾಗಿದಲ್ಲಿ ಈ ಯೋಜನೆಗಳು ಪೂರ್ಣ ಗೊಂಡಿವೆಯೇ, ಹಾಗಿಲ್ಲದಲ್ಲಿ ಕಾರಣಗಳೇನು ಹಾಗೂ ಈ ಯೋಜನೆಗಾಗಿ ಈವರೆಗೆ ಖರ್ಚಾಗಿರುವ ಹಣವೆಷ್ಟು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಹುಕ್ಕೇರಿ - ಸಂಕೇಶ್ವರ ಮತ್ತು ಸುತ್ತ ಮುತ್ತಲಿನ 16 ಹಳ್ಳಿಗಳಿಗೆ ಸೇರಿ ಒಂದು ಪ್ರಾಂತೀಯ ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಜೂನ್ 94ರ ಅಂತ್ಯದವರೆಗೆ ಒಟ್ಟು 78.94 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗಾಗಿ 93-94ರಲ್ಲಿ ಮೀಸಲಿಟ್ಟ ಹಣ

330 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವರ ಅಭಿವೃದ್ಧಿಗಾಗಿ 1993-94ನೇ ವರ್ಷದಲ್ಲಿ ಮೀಸಲಿಟ್ಟ ಹಣವೆಷ್ಟು?*

ಆ) *ಆ ಹಣದಲ್ಲಿ ಖರ್ಚಾದ ಹಾಗೂ ಉಳಿಕೆ ಹಣ ಎಷ್ಟು?*

ಇ) *ಉಳಿಯಲು ಕಾರಣಗಳೇನು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)1993-94ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಏಳಿಗೆಗೆ ಮೀಸಲಿರಿಸಿದ ಹಣದ ವಿವರಣೆ ಈ ಕೆಳಗೆ ತೋರಿಸಿದೆ.

	ಇಲಾಖಾ ಕಾರ್ಯಕ್ರಮಗಳು ಯೋಜನೆ: ಯೋಜನೇತರದಲ್ಲಿ ಮೀಸಲಿಟ್ಟ ಹಣ	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ
			ರೂ. ಲಕ್ಷಗಳಲ್ಲಿ
	10271.55	29.352.20	4168.72
ಖರ್ಚು	9747.17	27176.66	3637.08
ಉಳಿಕೆ	524.38	2175.54	531.64

ಇ) 1993-94 ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹೊಸ ಯೋಜನೆಗಳಿಗೆ ಅಂಗೀಕಾರ ಸಕಾಲದಲ್ಲಿ ದೊರೆಯದೇ ಇದ್ದ ಕಾರಣ ಹಣ ಬಾಕಿ ಉಳಿದಿದೆ?

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಿಂದುಳಿದವರ ವಿದ್ಯಾರ್ಥಿನಿಲಯ

2 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗದವರ ಇಲಾಖೆಯಿಂದ ಮಾದಾಪುರದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಆರಂಭಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಸೋಮವಾರ ಪೇಟೆ ತಾಲ್ಲೂಕಿನ ಶಿರಂಗಾಲದಲ್ಲಿ ರೇಷ್ಮೆ ಇಲಾಖಾ ವತಿಯಿಂದ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಹೊಸ ಕಟ್ಟಡ ಮಂಜೂರು

3 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನ ಶಿರಂಗಾಲ ಚಾಕಿ ಸಾಕಾಣಿಕಾ ಕೇಂದ್ರಕ್ಕೆ ಹೊಸ ಕಟ್ಟಡ ಮಂಜೂರು ಮಾಡುವ ವಿಷಯ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು.

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯ ಅಕ್ರಮ ಭೂಮಿಯನ್ನು ಸಕ್ರಮ ಮಾಡುವ ಬಗ್ಗೆ ಇರುವ ತೊಡಕುಗಳು

4 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಅಕ್ರಮ ಭೂಮಿ ಸಕ್ರಮಗೊಳಿಸುವ ಸಂದರ್ಭದಲ್ಲಿ ಕೆಲವೇ ಕಾಫಿ ಗಿಡಗಳು ಇದ್ದರೂ ಅದನ್ನು ಕಾಫಿ ತೋಟ ಎಂದು ಪರಿಗಣಿಸಲಾಗುತ್ತಿರುವುದರಿಂದ ಸಣ್ಣ ರೈತರು ಮತ್ತು ಬಡಜನರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ಸರ್ಕಾರದವರು ಬಗೆಹರಿಸಲು ಕೈಗೊಳ್ಳುವ ಕ್ರಮವೇನು?

ಇ) ಈ ಜನಗಳಿಗೆ ವಿತರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ??

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಕಾಫಿ ಸಾಗುವಳಿ ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ತಿದ್ದುಪಡಿ ವಿಧೇಯಕವಾದ ನಂತರ ಪರಿಗಣಿಸಲಾಗುವುದು.